ಶ್ರೀ ಡಾ।। ಪೆಗ್ಗಪ್ಪ ಲಮಾಣಿ.—ಸುಮಾರು ೭೫೦ ಜನ ಶಿಕ್ಷಣ ಇಲಾಖೆಯಲ್ಲಿ ಪ್ರಮೋಷನ್‌ನ್ನು ಪಡೆದು, ಪ್ರಮೋಷನ್ ಇಲ್ಲದ ಹಾಗೆ ತ್ರಿಶಂಕು ಸ್ವರ್ಗದಲ್ಲಿದ್ದಾರೆ ಎಂದು ಹೇಳಬಹುದು. ಪ್ರಮೋಷನ್ ಸಿಕ್ಕುತ್ತದೆ ಎಂದು ಹೋಗಿ ಬಿಡುತ್ತಾರೆ ಮುಂದೆ ಅವರಿಗೆ ಯಾವ ರೀತಿಯ ಉತ್ತೇಜನವೂ ಸಿಕ್ಕುವುದಿಲ್ಲ. ೧೯೭೧ ರಲ್ಲಿ ಪ್ರಮೋಷನ್ ಸಿಕ್ಕಿದ್ದರೂ ಸಿಕ್ಕಿಲ್ಲದ ಪರಿಸ್ಥಿತಿಯಲ್ಲಿದ್ದಾರೆ. ಅವರನ್ನು ರೆಗ್ಯುಲರೈಸ್ ಮಾಡಿಲ್ಲ. ಆರ್ಟಿಕಲ್ ೩೨೮ ಕೆಳಗೆ ಅವರು ಕೆಲಸ ಮಾಡುತ್ತಿದ್ದಾರೆ. ಕೆಲವರು ರಿಟೈರ್ ಸಹ ಆಗಿ ಬಿಟ್ಟಿದ್ದಾರೆ. ಆದರೆ ಮಂತ್ರಿಗಳಿಂದ ಸಾಮಾನ್ಯ ಉತ್ತರ ಬರುತ್ತದೆ. ಅದೇನೆಂದರೆ, ಆದಷ್ಟು ಬೇಗನೆ ಮಾಡುತ್ತೇವೆಂದು ಹೇಳುತ್ತಾರೆ. ಇದನ್ನು ನಾನು ಒಪ್ಪುವುದಿಲ್ಲ. ಒಂದು ನಿಗದಿಪಡಿಸಿದ ಅವಧಿಯನ್ನು ತಾವು ಹೇಳಿ. ಆ ಅವಧಿಯೊಳಗೆ ಅವರನ್ನು ರೆಗ್ಯುಲರೈಸ್ ಮಾಡುವುದಕ್ಕೆ ಸಾಧ್ಯವೇ ?

ಶ್ರೀ ಬಿ. ರಾಚಯ್ಯ.—ಈ ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಹಾಗೂ ಪುರಸಭೆಗಳು ಇಂತಹ ಕಡೆ ಶಾಲೆಗಳಲ್ಲಿ ಕೆಲಸ ಮಾಡತಕ್ಕಂಥವರನ್ನೂ ಒಟ್ಟಿಗೆ ಸೇರಿಸಿ ಜೇಷ್ಠತಾ ಪಟ್ಟಿಯನ್ನು ತಯಾರು ಮಾಡಬೇಕಾಗಿತ್ತು. ಆ ಜೇಷ್ಠತಾ ಪಟ್ಟಿ ಪೂರ್ಣ ಹಂತದಲ್ಲಿದೆ. ಬಹುಶಃ ಈ ಅಧಿವೇಶನ ಆದ ಮೇಲೆ ಮುಂದಿನ ಅಧಿವೇಶನ ಬರುವುದರೊಳಗೆ ಇದನ್ನು ಪೂರೈಸುತ್ತೇವೆ ಎಂಬ ಭರವಸೆಯನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಕೊಡಬಲ್ಲೆ.

ವರ್ತೂರು ಕ್ಷೇತ್ರದಲ್ಲಿರುವ ಜಾನುವಾರುಗಳ ಸಂಖ್ಯೆ ಮತ್ತು ಪಶುವೈದ್ಯಶಾಲೆಗಳು

೩೭೭ (೧೧೪) ಶ್ರೀ ಎಸ್. ಸೂರ್ಯನಾರಾಯಣರಾವ್ (ವರ್ತೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಪಶುವೈದ್ಯ ಪಶುಸಂಗೋಪನಾ ಹಾಗೂ ತೋಟಗಾರಿಕೆ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ :—

ಅ) ವರ್ತೂರು ಕ್ಷೇತ್ರದಲ್ಲಿರುವ ಜಾನುವಾರುಗಳ ಸಂಖ್ಯೆ ಎಷ್ಟು ?

ಆ) ಈ ಕ್ಷೇತ್ರದಲ್ಲಿ ಎಷ್ಟು ಪಶುವೈದ್ಯ ಶಾಲೆಗಳಿವೆ ?

ಇ) ಎಷ್ಟು ಜಾನುವಾರುಗಳಿಗೆ ಒಂದರಂತೆ ಪಶುವೈದ್ಯ ಶಾಲೆಗಳು ಇರಬೇಕು ?

ಈ) ವರ್ತೂರು ಕ್ಷೇತ್ರದಲ್ಲಿ ಈ ಮಟ್ಟವನ್ನು ಮುಟ್ಟಲು ಎಷ್ಟು ಪಶುವೈದ್ಯಶಾಲೆಗಳನ್ನು ಸರ್ಕಾರದವರು ಆರಂಭಿಸುವ ಕ್ರಮ ಕೈಗೊಂಡಿದ್ದಾರೆ ?

ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್ (ಪಶುಸಂಗೋಪನಾ, ಪಶುವೈದ್ಯ ಸೇವೆ ಮತ್ತು ತೋಟಗಾರಿಕೆ ಮಂತ್ರಿಗಳು).—

ಅ) ವರ್ತೂರು ಕ್ಷೇತ್ರದಲ್ಲಿರುವ ಜಾನುವಾರುಗಳ ಸಂಖ್ಯೆ: ೨೯,೧೭೨.

ಆ) ಪಶುವೈದ್ಯ ಶಾಲೆಗಳು—ಸಿ ಗ್ರಾಮೀಣ ಪಶುವೈದ್ಯ ಶಾಲೆಗಳು: ೨

ಇ) ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನ ಪ್ರಕಾರ ೧೦,೦೦೦ ದನಕರುಗಳಿಗೆ ಒಂದು ಪಶುವೈದ್ಯ ವೈದ್ಯಶಾಲೆ ಇರಬೇಕು.

ಈ) ಉದ್ಭವಿಸುವುದಿಲ್ಲ. ವರ್ತೂರು ಕ್ಷೇತ್ರ ಈಗಾಗಲೇ ಈ ಮಟ್ಟವನ್ನು ಮುಟ್ಟಿದೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—೧೦ ಸಾವಿರ ಜಾನುವಾರುಗಳಿಗೆ ಒಂದು ಆಸ್ಪತ್ರೆ ಎಂದು ಇಟ್ಟಿದ್ದಾರೆ. ಆ ಆಸ್ಪತ್ರೆಗೆ ದನಕರುಗಳು ಬರಬೇಕಾದರೆ ೪ ಮೈಲಿ ೫ ಮೈಲಿ ದೂರದಿಂದ ಆಸ್ಪತ್ರೆಗೆ ಬರಬೇಕಾಗುತ್ತದೆ. ಆದ್ದರಿಂದ ಇದರ ಸಂಖ್ಯೆ ಏನಿದೆ ಇದನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವೇ ? ಅಥವಾ ಇನ್ನೂ ಅನೇಕ ಕಡೆ ಆಸ್ಪತ್ರೆಗಳನ್ನು ಈ ನನ್ನ ಕ್ಷೇತ್ರದಲ್ಲಿ ತಾವು ನಿರ್ಮಾಣ ಮಾಡುವುದಕ್ಕೆ ಸಾಧ್ಯವೇ ? ಇದರ ಬಗ್ಗೆ ಸರ್ಕಾರದ ಅಭಿಪ್ರಾಯವೇನು ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಸರ್ಕಾರದ ನೀತಿ ಪ್ರಕಾರ ತಮ್ಮ ವರ್ತೂರು ಕ್ಷೇತ್ರದಲ್ಲಿ ಸಾಕಷ್ಟು ಆಸ್ಪತ್ರೆಗಳು ಇವೆ. ಬೇರೆ ಎಷ್ಟೋ ಕಡೆ ಆಸ್ಪತ್ರೆಗಳು ಇಲ್ಲ. ಅದಕ್ಕಾಗಿ ಸಿಬ್ಬಂದಿ ವ್ಯವಸ್ಥೆ ಆದ ಮೇಲೆ ಈ ಬಗ್ಗೆ ಆಲೋಚನೆ ಮಾಡುತ್ತೇನೆ.